**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂಖ್ಯೆ: ಸಿಬ್ಬಂದಿ-2/ಲಿಪಿಕ/ವಿವ 116/2014-15

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ: 20 -01-2015.

## ಸುತ್ತೋಲೆ

ವಿಷಯ:-ಕಛೇರಿಗಳಿಗೆ ಸಕಾಲದಲ್ಲಿ ಹಾಜರಾಗುವ ಬಗ್ಗೆ.

---------

ಕೃಷಿ ನಿರ್ದೇಶನಾಲಯ ಹಾಗೂ ಆವರಣ ಕಛೇರಿಗಳಲ್ಲಿ ಅಧಿಕಾರಿ/ಸಿಬ್ಬಂದಿ ನೌಕರರು ಕಛೇರಿಗಳಿಗೆ ಸರಿಯಾದ ಸಮಯಕ್ಕೆ ಹಾಜರಾಗದೇ ಇರುವುದು ಕಂಡುಬಂದಿದ್ದು, ಈಗಾಗಲೇ ಹಲವು ಸುತ್ತೋಲೆಗಳನ್ನು ಈ ಬಗ್ಗೆ ಕಳುಹಿಸಿದ್ದರೂ ಸಹ ನಿಗದಿತ ವೇಳೆಗೆ ಕಛೇರಿಗೆ ಹಾಜರಾಗದೇ ಇರುವುದು ಕಂಡುಬಂದಿರುತ್ತದೆ. ಕಛೇರಿ ವೇಳೆಯಲ್ಲಿಯೂ ಕಛೇರಿ ಆವರಣದಲ್ಲಿ ಅನಾವಶ್ಯಕವಾಗಿ ತಿರುಗಾಡುವುದನ್ನು ಸಹ ಗಮನಿಸಲಾಗಿದ್ದು, ಅಧಿಕಾರಿ/ನೌಕರರು ಕಛೇರಿ ವೇಳೆಯಲ್ಲಿ ಕಛೇರಿ ಬಿಟ್ಟು ಹೊರಗಡೆಗೆ ತೆರಳಬೇಕಾದಲ್ಲಿ ತಪ್ಪದೇ ಆಯಾ ಕಛೇರಿ ವಿಭಾಗದ ಮುಖ್ಯಸ್ಥರ ಅನುಮತಿ ಪಡೆದು ಚಲನವಲನ ವಹಿಯಲ್ಲಿ ನಮೂದಿಸಿ ತೆರಳಬೇಕೆಂದು ಸೂಚಿಸಿದ್ದರೂ, ಅದನ್ನು ಪಾಲಿಸುತ್ತಿರುವುದಿಲ್ಲ. ಇನ್ನು ಮುಂದೆ ಪಾಲಿಸತಕ್ಕದ್ದು.

ಅಧೀನ ಕಛೇರಿ ಮತ್ತು ವಿಭಾಗದ ಮುಖ್ಯಸ್ಥರು ನಿಗದಿತ ಅವಧಿಯೊಳಗೆ ಕಛೇರಿಗೆ ಹಾಜರಾಗಿ ತಡವಾಗಿ ಬರುವ ಸಿಬ್ಬಂದಿ ವರ್ಗದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದು. ತಡವಾಗಿ ಬರುವ ಅನೇಕ ನೌಕರರು ಬಯೋಮೆಟ್ರಿಕ್‌ನಲ್ಲಿ ಹಾಜರಾತಿ ಹಾಕಿ ಹಾಜರಾತಿ ವಹಿಯಲ್ಲಿ ಹಾಕದೇ ಇರುವುದು ಕಂಡುಬಂದಿರುತ್ತದೆ **``ಕೇಂದ್ರ ಕಛೇರಿಯಲ್ಲಿನ ಎಲ್ಲಾ ಅಧಿಕಾರಿ ನೌಕರರು ಯಾವುದೇ ರಜೆಯ ಮೇಲೆ ತೆರಳುವ ಮುಂಚೆ ಅವರ ವಿಭಾಗದ ಮುಖ್ಯಸ್ಥರ ಪೂರ್ವಾನುಮತಿಯನ್ನು ಪಡೆದು ರಜೆಯನ್ನು ಉಪಯೋಗಿಸಿಕೊಳ್ಳುವುದು. ಪೂರ್ವಾನುಮತಿ ಪಡೆಯದೇ ಹೋದಲ್ಲಿ ಆ ದಿನವನ್ನು ವೇತನ ರಹಿತ ದಿನ ಎಂದು ಪರಿಗಣಿಸಲಾಗುವುದು. ರಜೆ ಅವಧಿಯಲ್ಲಿ ಆಯಾ ವಿಭಾಗಕ್ಕೆ ಸಂಬಂಧಪಟ್ಟ ಕಡತಗಳ ನಿರ್ವಹಣೆಗಾಗಿ ಅಲ್ಮೆರಾ ಕೀಗಳನ್ನು ಅವರ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಮೇಲಿನ ಸೂಚನೆಗಳನ್ನು ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಸಂಬಂಧಪಟ್ಟ ನೌಕರರು ಹಾಗೂ ಅವರ ಮೇಲಾಧಿಕಾರಿಗಳ ವಿರುದ್ಧ ಸೂಕ್ತ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಯುವುದು.'' ಪದೇ ಪದೇ ದೀರ್ಘ ಕಾಲಾವಧಿ ರಜೆಯನ್ನು ಅಲ್ಪಾವಧಿಗೆ ಬಳಸಿಕೊಳ್ಳುವುದನ್ನು ತಪ್ಪಿಸುವುದು.**

20/1/15
ಅಪರ ನಿರ್ದೇಶಕರು(ಆಡಳಿತ)

ಪ್ರತಿಗಳನ್ನು:-

1. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು ರವರ ಆಪ್ತ ವಿಭಾಗಗಳಿಗೆ
2. ಕೇಂದ್ರ ಕಛೇರಿಯ ಎಲ್ಲಾ ಅಪರ ಕೃಷಿ ನಿರ್ದೇಶಕರು/ಜಂಟಿ ಕೃಷಿ ನಿರ್ದೇಶಕರು/ಉಪ ಕೃಷಿ ನಿರ್ದೇಶಕರುಗಳಿಗೆ
3. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಕೇಂದ್ರ ಕಛೇರಿ
4. ಆಡಳಿತಾಧಿಕಾರಿಗಳು/ಆಡಳಿತ ಸಹಾಯಕರು, ಕೇಂದ್ರ ಕಛೇರಿ

E:\lipika\letters.doc

ಕೃಷಿ ಆಯುಕ್ತರ ಕಛೇರಿ ... ಶೇಷಾದ್ರಿ ರಸ್ತೆ, ಬೆಂ-1
21/1/2015